**ಅಸಲು ದಾವಾ ನಂ.327/2021** **ಪಿ ಡಬ್ಲ್ಯೂ: 1**

**(ಇಂದು ದಿನಾಂಕಃ 26-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ ಕೆ.ವಿ.ಆರ್ ರವರಿಂದಃ**

1. ನನ್ನ ತಂದೆ ನಾರಾಯಣ ಶೆಟ್ಟಿ ಬೇಲೂರಿನ ಜೆ.ಪಿ ನಗರದಲ್ಲಿ ಸ್ವಂತ ಮನೆಯಲ್ಲಿ ವಾಸವಾಗಿದ್ದರು. ನನ್ನ ತಂದೆ ಸಂತೆಯಲ್ಲಿ ವ್ಯಾಪಾರ ಮಾಡುತ್ತಿದ್ದರು. ನನ್ನ ತಂದೆ ಅವರ ಜೀವಿತಾ ಕಾಲದಲ್ಲಿ ವ್ಯವಹಾರ ಮಾಡುತ್ತಿದ್ದ ಬಗ್ಗೆ ನನಗೆ ತಿಳಿದಿರುತ್ತದೆ. ನನ್ನ ತಂದೆ ಸಣ್ಣಪುಟ್ಟ ಕೈ ಸಾಲ ಕೊಡುವ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ನಿವೇಶನವನ್ನು ಖರೀದಿಸಿದ ಬಗ್ಗೆ ನಾವು ಚಿಕ್ಕವರಾಗಿದ್ದ ಕಾರಣ, ಮಾಹಿತಿ ಇರುವುದಿಲ್ಲ. ನನ್ನ ತಂದೆ 2016 ರಲ್ಲಿ ಮರಣ ಹೊಂದಿರುತ್ತಾರೆ. ಅವರು ಮರಣ ಹೊಂದುರುವವರೆಗೆ ಕುಟುಂಬದ ವ್ಯವಹಾರವನ್ನು ಅವರೇ ನೋಡಿಕೊಳ್ಳುತ್ತಿದ್ದರು. ದಾವಾ ಸ್ವತ್ತು ನನ್ನ ತಂದೆಗೆ 1990 ರಲ್ಲಿ ಖಾತೆ ಆಗಿರುತ್ತದೆ. 1990 ರಿಂದ ದಾವಾ ಆಸ್ತಿಗೆ ಕಂದಾಯ ಕಟ್ಟಿದ ಬಗ್ಗೆ ದಾಖಲೆ ಇರುತ್ತದೆ.

2. ದಾವಾ ಆಸ್ತಿಯಲ್ಲಿನ ಮನೆಯನ್ನು ನಮ್ಮ ತಂದೆ ಕಟ್ಟಿದ್ದರು. ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಮನೆಯನ್ನು ಯಾವ ವರ್ಷ ಕಟ್ಟಿದ್ದರು ಎಂದು ಮತ್ತು ಯಾರು ಗಾರೆ ಕೆಲಸ ಮಾಡಿದ್ದರು ಎಂದು ಗೊತ್ತಿಲ್ಲ. ಮನೆಗೆ ಸಂಬಂಧಿಸಿದ ವಿದ್ಯುತ್‌ಚ್ಛಕ್ತಿ ಸಂಪರ್ಕ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಮನೆಗೆ ನೀರಿನ ಸಂಪರ್ಕ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದ ಕ್ರಯ ಪತ್ರದಲ್ಲಿ ಯಾವ ಸಾಕ್ಷಿದಾರರು ಸಹಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಮನೆ ಕಟ್ಟುವಾಗ ಸಂಬಂಧಪಟ್ಟ ಪಂಚಾಯತಿಯಿಂದ ಲೈಸನ್ಸ್ ಪಡೆದುಕೊಂಡ ಬಗ್ಗೆ ನಾನು ನೋಡಿರುವುದಿಲ್ಲ.

3. ನಿಪಿ-2 ಇ ಸ್ವತ್ತು 2020-21 ರಲ್ಲಿ ಆಗಿರುತ್ತದೆ. ನಿಪಿ-2 ರಲ್ಲಿ ಸ್ವತ್ತಿನ ಪ್ರಕಾರ ನಿವೇಶನ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿ ಕಟ್ಟಡದ ವಿಸ್ತೀರ್ಣದ ಕಾಲಂ ಖಾಲಿ ಇರುತ್ತದೆ ಎಂದರೆ ಸಾಕ್ಷಿ

ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ದಾವೆ ದಾಖಲಿಸುವ ಮೊದಲು ಮಹೇಶ್ ವಕೀಲರ ಮುಖಾಂತರ ಕೇವಿಯಟ್ ಅನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಕೇವಿಯಟ್ ನಲ್ಲಿ ನಿವೇಶನ ಎಂದು ನಮೂದಿಸಿರುವ ವಿಚಾರ ಗೊತ್ತಿರುತ್ತದೆ. ನಿಪಿ-1 ಕ್ರಯಪತ್ರ ನನ್ನ ತಂದೆ ಸೃಷ್ಟಿಮಾಡಿಕೊಂಡ ಕ್ರಯಪತ್ರ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದಲ್ಲಿ ನಮೂದಿಸಿರುವ ಆಸ್ತಿಯನ್ನು ಮಾರಾಟ ಮಾಡಿಲ್ಲ ಮತ್ತು ಈ ರೀತಿ ಕ್ರಯಪತ್ರ ಆಗಿದೆ ಎನ್ನುವ ವಿಚಾರವೂ ಸಹ ಪ್ರತಿವಾದಿಯರಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

4. ಪ್ರತಿವಾದಿಯರ ತಂದೆ ಏನು ಕೆಲಸ ಮಾಡುತ್ತಿದ್ದರು ಎಂದು ಗೊತ್ತಿಲ್ಲ. ಪ್ರತಿವಾದಿಯರ ತಂದೆಯನ್ನು ನೋಡಿಲ್ಲ. ಪ್ರತಿವಾದಿಯರ ತಂದೆ ಮದ್ಯಪಾನ ಮಾಡುವ ಹವ್ಯಾಸವನ್ನು ಹೊಂದಿದ್ದು, ಅವರನ್ನು ಉಪನೋಂದಣಾಧಿಕಾರಿಗಳ ಕಚೇರಿಗೆ ಕರೆದುಕೊಂಡು ಹೋಗಿ ನಿಪಿ-1 ಕ್ರಯಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 15-20 ವರ್ಷಗಳಿಂದ ನಿಪಿ-1 ಕ್ರಯಪತ್ರವನ್ನು ನೋಡಿರುತ್ತೇನೆ. ದಾವಾ ಆಸ್ತಿಗೆ ಸುಮಾರು ಬಾರಿ ಹೋಗಿರುತ್ತೇನೆ. ದಾವಾ ಸ್ವತ್ತಿನ ಸುತ್ತ ಯಾರ್ಯಾರ ಮನೆಗಳು ಬರುತ್ತವೆ ಎಂದು ನನಗೆ ತಿಳಿದಿರುತ್ತದೆ. ದಾವಾ ಸ್ವತ್ತಿನ ಪೂರ್ವಕ್ಕೆ ಮಂಜುನಾಥ್ ರವರ ಮನೆ, ಪಶ್ಚಿಮಕ್ಕೆ ಪ್ರತಿವಾದಿಯರ ಖಾಲಿ ಜಾಗ, ಉತ್ತರಕ್ಕೆ ಚೀಕನಹಳ್ಳಿ ರಸ್ತೆ, ದಕ್ಷಿಣಕ್ಕೆ ಪ್ರತಿವಾದಿಯರ ನಿವೇಶನ ಇರುತ್ತದೆ.

(ಮುಂದುವರೆದ ಪಾಟೀಸವಾಲಿಗೆ ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದು, ಸಮಾಯಾವಕಾಶ ನೀಡಿ ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**(ನಾಗೇಂದ್ರ)**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು**